ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-4 Issue 2, SEP-OCT 2022, Pp. 10-13.
©*IIMRD*, Mysuru

IIMRD JOURNALS
www.iimrd.com

# ಮರುಳಸಿದ್ಧರು

**ಡಾ. ಎ.ಸಿ. ವಾಲಿ***

*ಸಹಾಯಕ ಪ್ರಾಧ್ಯಾಪಕರು, ಶ್ರೀ ಎಂ. ಬಿ. ಹಳ್ಳಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಅಣ್ಣಿಗೇರಿ, ಧಾರವಾಡ

***ಸಾರಾಂಶ:* (Abstract)**

*ವೀರಶೈವ ಧರ್ಮದಲ್ಲಿ ಕಾಲ ಕಾಲಕ್ಕೆ ಒಂದೇ ಹೆಸರಿನ ಅನೇಕ ಜನ ಮರುಳಸಿದ್ಧರು ಆಗಿಹೋಗಿದ್ದಾರೆ. ಅವರನ್ನು ಮರುಳಾರಾಧ್ಯ, ಮರುಳಸಿದ್ಧ, ಮರುಳಮುನಿ, ಸಿದ್ಧಮರುಳ ಹೀಗೆ ಕಾವ್ಯಗಳು ಕರೆಯಲ್ಪಟ್ಟಿವೆ. ಇದರಲ್ಲಿ ಬಸವಾದಿ ಶಿವಶರಣರ ಹಿರಿಯ ಸಮಕಾಲೀನರಾದದ ಮರುಳಸಿದ್ಧ ಅತ್ಯಂತ ಪ್ರಸಿದ್ಧಿಯನ್ನು ಪಡೆದುಕೊಂಡವನಾಗಿದ್ದಾನೆ. ಈತ ವಚನಕಾರನು ಹೌದು ಹಾಗೆಯೇ ವಚನಕಾರರಿಂದ ಸ್ತುತಿಸಲ್ಪಟ್ಟಿದ್ದಾನೆ. ಪ್ರಸ್ತುತ ಲೇಖನದಲ್ಲಿ ಮರುಳಸಿದ್ಧರ ಕುರಿತು ವಿವರಿಸಲಾಗಿದೆ.*

***ಮುಖ್ಯಪದಗಳು* (Keywords):** *ಮರುಳಸಿದ್ಧ, ಶೈವಪರಂಪರೆ, ವೀರಶೈವ, ಶಿವಶರಣರು, ಬಸವಣ್ಣ.*

**ಪೀಠಿಕೆ**

ವಚನ ಸಾಹಿತ್ಯವು ಬಸವಣ್ಣನ ಕಾಲಕ್ಕಿಂತ ಮೊದಲೇ ಆರಂಭವಾಗಿದೆ. ಆದ್ಯ ವಚನಕಾರ ಜೇಡರದಾಸಿಮಯ್ಯನ ವಚನಗಳಲ್ಲಿ ಇದರ ಸುಳಿವು ಸಿಗುತ್ತದೆ.

***'ಮೃಡ ಭಕ್ತರ ನುಡಿಗಡಣವೆ ಕಡೆಗೀಲು'***

***'ನಿಮ್ಮ ಶರಣರ ಸೂಳ್ನುಡಿಯ ಒಂದರೆಗಳಿಗೆಯಿತ್ತಡೆ'***[1]

ಹೀಗಾಗಿ ವಚನಕಾರರು ತಮ್ಮ ಗುರು ಹಿರಿಯರ ಬಗ್ಗೆ ಆಪಾರ ಕಾಳಜಿಯನ್ನು ವ್ಯಕ್ತಪಡಿಸಿದ್ದಾರೆ. ಪುಲಿಗೆರೆ ಆದಯ್ಯನೆಂದು ಪ್ರಸಿದ್ಧನಾದ ಶರಣನು 'ಸೌರಾಷ್ಟ್ರ ಸೋಮೇಶ್ವರ' ವಚನಾಂಕಿತದಿಂದ ಹಲವಾರು ವಚನಗಳನ್ನು ರಚಿಸಿದ್ದಾನೆ. ಅದರಲ್ಲಿ 'ಮರುಳಸಿದ್ಧಯ್ಯ ದೇವರ ಅದೃಷ್ಟ ಪ್ರಸಾದ ನಿಷ್ಠೆ'[2], 'ಮರುಳಸಿದ್ಧಯ್ಯದೇವರೆನ್ನ ಶ್ರೋತೃ'[3] ಎಂದಿದ್ದಾನೆ. ಇಲ್ಲಿ ಮರುಳಸಿದ್ಧನಿಗೆ ದೇವರು ಎಂಬ ಶಬ್ದವನ್ನು ಪ್ರಯೋಗ ಮಾಡಿದ್ದು ವಿಶೇಷವೆನಿಸುತ್ತದೆ. ಹಾವಿನಹಾಳ ಕಲ್ಲಯ್ಯ 'ಮಹಾಲಿಂಗ ಕಲ್ಲೇಶ್ವರ' ಎಂಬ ವಚನಾಂಕಿತದಿಂದ ಬರೆಯಲ್ಪಡುವ ವಚನದಲ್ಲಿ 'ಎನ್ನ ಶ್ರೋತೃದಲ್ಲಿ ಸ್ವಾಯತವಾದನಯ್ಯ ಮರುಳಸಿದ್ಧೇಶ್ವರ ದೇವರು'[4] ಎಂಬುದು ಗಮರ್ನಾಹವಾಗಿದೆ. ಮೆರೆಮಿಂಡಯ್ಯ ವಚನಕಾರ ಮರುಳಸಿದ್ಧನನ್ನು 'ಎನ್ನ ಹೃದಯ ಶುದ್ಧವಾಯಿತ್ತಯ್ಯ ಮರುಳಸಿದ್ಧೇಶ್ವರದೇವರ ಧರ್ಮದಿಂದ'[5] ಹೀಗೆ ಅನೇಕ ವಚನಕಾರರು

*Please cite this article as: ಎ.ಸಿ. ವಾಲಿ* (2022). ಮರುಳಸಿದ್ಧರು. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 4(2). ಪು.ಸಂ.* 10–13.

ಮರುಳಸಿದ್ಧರನ್ನು ದೇವರು ಶಬ್ದದಿಂದ ಸಂಬೋಧನೆ ಮಾಡಿದ್ದು ಕಂಡುಬರುತ್ತದೆ. ಸೊನ್ನಲಗಿಯ ಸಿದ್ಧರಾಮನಂತು ತನ್ನದೊಂದು ವಚನದಲ್ಲಿ 'ಮರುಳಸಿದ್ಧನ ವಚನ ಅರವತ್ತೆಂಟು ಸಾಸಿರ ಎಂದಿದ್ದಾನೆ'

ಬಸವೋತ್ತರ ಕಾಲದ ವಚನಕಾರರಾದ ತೋಂಟದ ಸಿದ್ಧಲಿಂಗಯತಿ, ಗುರುಸಿದ್ಧದೇವರು, ಮುಮ್ಮಡಿ ಕಾರ್ಯೇಂದ್ರ, ಕಡಕೋಳ ಮಡಿವಾಳಪ್ಪ ತಮ್ಮ ವಚನಗಳಲ್ಲಿ ಮರುಳಸಿದ್ಧನನ್ನು ಕುರಿತು ಉಲ್ಲೇಖ ಮಾಡಿದ್ದಾರೆ. ಇವರೆಲ್ಲ ಬಸವಾದಿ ಶರಣರ ಹಿರಿಯ ಸಮಕಾಲೀನ ಮರುಳಸಿದ್ಧನನ್ನು ಕುರಿತು ಬರೆದಿದ್ದಾರೆ. ಈ ಮರುಳಸಿದ್ಧ ರೇವಣಸಿದ್ಧನ ಒಡನಾಡಿಯಾಗಿದ್ದು ತಿಳಿದು ಬರುತ್ತದೆ. ಅಲ್ಲದೇ ಪಂಚಚಾರ್ಯರಲ್ಲಿ ಈತನು ಒಬ್ಬ ಎಂಬ ಸಂಗತಿ ಸಿಗುತ್ತದೆ.

ಪಂಚ ಕಳಸಗಳನ್ನು ಸ್ಥಾಪಿಸುವಲ್ಲಿ ಮರುಳಸಿದ್ಧನನ್ನು ಅಗ್ನಿ ದಿಕ್ಕಿನ ತಾಮ್ರ ಕಳಸದೆಡೆಗೆ ಆಹ್ವಾನಿಸುವುದು ದೀಕ್ಷೆಯ ಸಂದರ್ಭದಲ್ಲಿ ಕಂಡುಬರುತ್ತದೆ. ಇದು ಹೀಗಿದೆ

***'ಮತ್ತೀಯಾ ಪೂರ್ವದಿಕ್ಸಂಬಂಧದಗ್ನಿ ದಿ***
***ಕ್ಕುತ್ತುಮದ ತಾಮ್ರ ಕಳಶದ ಸಮಿಪದೊಳಿಟ್ಟು***
***ತ್ತತ್ತರರುಣಣಾಂಬರದ ಪೀಠದೊಳು***
***ತತ್ಕಳಶದಾಚಾರ್ಯ ಋತ್ವಿಜರನು***
***ಚಿತ್ತಮಂ ಮರುಳಸಿದ್ಧೇಶ್ವರನೆನುತ ಕಲ್ಪ***
***ಸುತ್ತ ಲಿಂಗಾಕಾರಮೆಂಬ ಮಂತ್ರವನೆ ಜಪಿ***
***ಸುತ ನಲವಿಂಮೂರ್ತಿಗೊಳಿಪುದಾ***
***ಗುರುಮೂರ್ತಿ ಶಿವಭಕ್ತರುತ್ಸಹದೊಳು'***[6]

ರೇವಣಸಿದ್ಧೇಶ್ವರ ಬೆಟ್ಟದಲ್ಲಿಯ ಆವ್ವೇರಹಳ್ಳಿಯ (ಕ್ರಿ.ಶ. 1193) ಶಾಸನದಲ್ಲಿ

***ಆನಂದ ಸಂವತ್ಸರದ ಆಗೊರತ್ತೆಗೆ***
***ಹಜರಗವಿ ಬಗಿಲ ತೆಗೆದು ಮುಲೋ***
***ಕ ಅರಿನಹಿ ಪವಡವ ತೋರಿದರು***
***ರೇವಣಸಿದ್ಧೇಶ್ವರನ ಮಗ***
***ಮರುಳ ಸಿದ್ಧೇಶ್ವರನು.......***[7]

ಎಂಬ ಉಲ್ಲೇಖವಿದೆ. ಈ ಶಾಸನಕ್ಕೆ ಪೂರಕವಾಗಿ ದೊರೆತ ಮರುಳಸಿದ್ಧನ ಏಕೈಕ ವಚನದಲ್ಲಿ ರೇವಣ್ಣ ಪ್ರಭುವೆ ಎಂದು ಅಂಕಿತವಿದೆ. ಬಹುತೇಕ ವಚನಕಾರರು ವಚನಾಂಕಿತವನ್ನು ಪತಿ, ಸೋದರ, ಆರಾಧ್ಯದೈವ, ಗುರು ಹೆಸರಿನಲ್ಲಿ ನಿವೇದಿಸಿಕೊಂಡಿರುವುದು ಕಂಡುಬರುತ್ತದೆ. ಉದಾಹರಣೆಗೆ ಕಾಳವ್ವೆ "ಉರಿಲಿಂಗಪೆದ್ದಿಗಳರಸ" ಗಂಗಾಬಿಕೆ "ಗಂಗಾಪ್ರಿಯ ಕೂಡಲಸಂಗ" ಗಜೇಶ ಮಸಣಯ್ಯನ ಪುಣ್ಯಸ್ತ್ರೀ "ಮಸಣಯ್ಯ ಪ್ರಿಯ ಗಜೇಶ್ವರ", ದುಗ್ಗಳೆ "ದಾಸಿಮಯ್ಯ ಪ್ರಿಯ ರಾಮನಾಥ", ಹಡಪದ ಲಿಂಗಮ್ಮ "ಅಪ್ಪಣ್ಣಪ್ರಿಯ ಚೆನ್ನಬಸವಣ್ಣ" ಹಾಗು ಮುಕ್ತಾಯಕ್ಕ" ಅಜಗಣ್ಣ ತಂದೆ" ಎಂದು ಅಂಕಿತವನ್ನು ಬಳಸಿರುವುದನ್ನು ಇಲ್ಲಿ ಅಮರಿಸಬಹುದಾಗಿದೆ. ಹೀಗಾಗಿ ಅವ್ವೇರಹಳ್ಳಿ ಶಾಸನೋಕ್ತ ರೇವಣಸಿದ್ಧ

ಮರುಳಸಿದ್ಧರ ಗುರು ಎಂಬ ಉಲ್ಲೇಖವಿದ್ದು ಮುಂದೆ ಆ ಗುರುವಿನ ಹೆಸರನ್ನೆ ಅಂಕಿತವನ್ನಾಗಿ ಮಾಡಿಕೊಂಡು ವಚನ ರಚಿಸಿರುವ ಸಾಧ್ಯತೆಯನ್ನು ಅಲ್ಲ ಗಳೆಯುವಂತಿಲ್ಲ. ಇವುಗಳ ಜೊತೆಗೆ ರೇವಣರ ಹೆಸರಿಗೆ ಸೇರಿಕೊಂಡ ಸಿದ್ಧರೆಂಬ ವಿಶೇಷಣ ಮರುಳಸಿದ್ಧರಿಗೂ ಆರೋಪಿತವಾಗಿರುವುದು. ಅವರ ಅನುಯಾಯಿ ಎಂಬುದಕ್ಕೆ ಇಲ್ಲವೆ ಸಿದ್ಧ ಪರಂಪರೆಯ ವಾರುಸುದಾರಿಕೆಯನ್ನು ಮುಂದುವರಿಸಿಕೊಂಡು ಬಂದಿರುವುದನ್ನು ಹೇಳಲು ಅವಕಾಶವಿದೆ. ಮರುಳಸಿದ್ಧರ ವಚನ ಹೀಗಿದೆ.

*ಆಲಿ ಆಲಯದಲ್ಲಿ ಕರಿಗೊಳಲು*
*ಆಲಿಸುವ ಶ್ರವಣವು ಮೇಲಿಪ್ಪ ಆಕಾಶವಡರಲು*
*ಉಲುಹು ನಿರ್ಭೂತ ಚಿತ್ತ ಸಮಾಧಾನವೆಯ್ದುಲು*
*ಕಾಲ ಕರ್ಮ ಭವಂಗಳ ಗೆಲುವುದಿದೇನು*
*ಸೋಜಿಗವು ರೇವಣ್ಣ ಪ್ರಭುವೆ"*[8]

ಎಂದು ಮರುಳಸಿದ್ಧರು ರೇವಣಸಿದ್ಧರನ್ನು ಆರಾಧ್ಯ ದೈವವೆಂದು ಸ್ವೀಕರಿಸಿದಂತಿದೆ.

ದೇವಕವಿಯು ತನ್ನ 'ಮರುಳಸಿದ್ಧಕಾವ್ಯ'ದಲ್ಲಿ ಮರುಳಸಿದ್ಧನನ್ನು ಕಥಾನಾಯಕನನ್ನಾಗಿ ಮಾಡಿಕೊಂಡಿದ್ದಾನೆ. ಈ ಕೃತಿಯಲ್ಲಿ ಮರುಳಸಿದ್ಧನ ಜನನಕ್ಕೆ ಸಂಬಂಧಿಸಿದಂತೆ ಗತಾನುಗತಿಕ ಕಥೆಯನ್ನು ಅಲ್ಲಗಳೆಯುತ್ತಾನೆ. ಕೂಗಿಮಾರ, ಸುಪ್ರಭೆ ಈತನ ತಂದೆ–ತಾಯಿಗಳು. ಕಗ್ಗಲ್ಲ ಬಾಚಿಗೌಡ–ಮಲ್ಲಮ್ಮ ಸಾಕು ತಾಯಿ–ತಂದೆಯರಾಗಿದ್ದಾರೆ. ಈ ಕಾವ್ಯದಲ್ಲಿ ರೇವಣಸಿದ್ಧನಿಂದ ಮರುಳಸಿದ್ಧನಿಗೆ ದೀಕ್ಷೆಯಾದುದನ್ನು

*ತಿರುಗಿ ಚಿನ್ಮಯಗಿರಿಯ ಗುರುರೇವಣಸಿದ್ಧ*
*ವರಮೂರ್ತಿಯಕಂಡು ಹರಷಮಿಗಿಲುಬ್ಬಿ ಮನ*
*ವೆರಸಿ ದಂಡಪ್ರಣಾಮಮ ಮಾಡಿ ತನುವೆರಸಿ ಕರುಣಾತ್ಮ ಶುದ್ಧನಾಗಿ*
*ಪುರಹರನೆ ಕಾಲಹರ ಕರ್ಮಹರ ದುರಿತಹರ*
*ಶರಣಾರ್ತಿ ಗುರುಮೂರ್ತಿಯೆಂದು ಭಯ ಭಕ್ತಿಯಿಂ*
*ಮರುಳಸಿದ್ಧೇಶ್ವರನು ಕಿಂಕುರ್ವಾಣದೊಳಿರಲು*
*ಗಿರಿಯ ಸಂಭ್ರಮವೆಸೆದುದು.*[9]

ಕವಿರೇವಣಸಿದ್ಧ ರಚಿಸಿದ ಮರುಳಸಿದ್ಧ ದೇವರ ಚರಿತ್ರೆಯಲ್ಲಿ ಮರುಳಸಿದ್ಧನ ಚರಿತ್ರೆ ಕಟ್ಟಿಕೊಡುವ ಈ ಕೃತಿ ದೇವಕವಿಯ ಕೃತಿಯನ್ನು ಅನುಸರಿಸಿರುವುದಾಗಿ ಕವಿ ಹೇಳಿಕೊಂಡಿದ್ದಾನೆ. ಬಾಚಿಗೌಡ–ಮಲ್ಲಮ್ಮರ ಸಾಕು ಮಗನಾಗಿದ್ದು, ಗೆಳೆಯರೊಡನೆ ದನ ಕಾದದ್ದು, ಎಳ್ಳು ಪವಾಡ, ಮಾರಿ ಜಾತ್ರೆಯ ಪ್ರಾಣಿಬಲಿ ನಿಷೇಧ, ಬೇತೂರು ಕೆರೆಯಲ್ಲಿ ಹಾಕಿದ್ದು, ಆನೆಯ ಜೊತೆ ಯುದ್ಧ, ಭೈರಗೊಂಡ, ಲಿಂಗಮ್ಮ ದಂಪತಿಗಳಿಗೆ ಅನುಗ್ರಹ, ರೇವಣಸಿದ್ಧರಿಂದ ಲಿಂಗ ದೀಕ್ಷಾನುಗ್ರಹ, ಓರಂಗಲ್ಲಿನಲ್ಲಿ ಗುಂಡಬ್ರಹ್ಮಯ್ಯರೊಡನೆ ಸಂಭಾಷಣೆ, ಮಾಯಾದೇವಿ ಶರಣಾಗತಿ ಹೀಗೆ ಅನೇಕ ಸಂಗತಿಗಳನ್ನು ಈ ಕೃತಿ ತಿಳಿಸುತ್ತದೆ.

ಉಜ್ಜಯಿನಿ ಪೀಠ ಪರಂಪರೆಯ ಕಲಿಯುಗದ ಜಗದ್ಗುರುಗಳು ಮರುಳಾರಾಧ್ಯರು ಈ ಮರುಳಸಿದ್ಧನ ಪೂರ್ವಾಚಾರ್ಯರು ಎಂಬುದು ತಿಳಿದು ಬರುತ್ತದೆ. ಇಂದಿನ ಮಧ್ಯಪ್ರದೇಶದ ಕ್ಷಿಪ್ರಾ ನದಿಯ ದಡದಲ್ಲಿರುವ ಮಹಾಕಾಲ ಉಜ್ಜಯಿನಿಯ ವಟಕ್ಷೇತ್ರದ ಸಿದ್ಧೇಶ್ವರ ಮಹಾಲಿಂಗದಿಂದ ಪ್ರಾದುರ್ಭವಿಸಿ ವೀರಶೈವ ಧರ್ಮವನ್ನು ಪ್ರಚಾರ ಮಾಡಿದವರು. ಇದೇ ಪೀಠ ಪರಂಪರೆಯಲ್ಲಿ ಶಂಭುಮುನಿಗಳು

ಹದಿನೈದನೆಯ ಪೀಠಾಧಿಪತಿಗಳಾಗಿ ಅಧಿಕಾರ ಸ್ವೀಕರಿಸುತ್ತಾರೆ. ಆಗ ಮಧ್ಯಪ್ರದೇಶದಲ್ಲಿ ಜೈನ ಧರ್ಮ ವೀರಶೈವ ಧರ್ಮವನ್ನು ನಾಶಗೊಳಿಸಲು ಪಣತೊಟ್ಟಾಗ ಶಂಭುಮುನಿಗಳು ಆ ಉಜ್ಜಯಿನಿಯನ್ನು ಬಿಟ್ಟು ಕಾಡಿನಲ್ಲಿ ಉಳಿದರು. ತರುವಾಯ ತಮ್ಮ ಶಿಷ್ಯನಾದ ಮರುಳಸಿದ್ಧನಿಗೆ ಪಟ್ಟಾಧಿಕಾರ ಕರುಣಿಸಿ ಲಿಂಗೈಕ್ಯರಾದರು. ಈ ಮರುಳಸಿದ್ಧನೇ ವಚನಕಾರ ಮರುಳಸಿದ್ಧನಾಗಿದ್ದಾನೆ.

ಹೂಲಿಯ ಸಿದ್ಧನಂಜೇಶ್ವರ ವಂಶದ ಮರುಳಾರಾಧ್ಯ ಉಜ್ಜಯಿನಿ ಪೀಠವನ್ನು ಮುನ್ನಡೆಸಿದ್ದು ತಿಳಿದುಬರುತ್ತದೆ. ಈತ ಪವಾಡ ಪುರುಷನಾಗಿದ್ದು ಕಗ್ಗಲಿ ಪುರದ ಗೌಡನಿಗೆ ಪುತ್ರ ಸಂತಾನ ನೀಡಿದನು. ತರಿಕೆರೆಯ ಸೋಮಣ್ಣನೆಂಬ ಕುರುಬಗೌಡನಿಗೆ ಮಗನನ್ನು ಕರುಣಿಸಿ ಅವನಿಗೆ ಅಮೋಘಸಿದ್ಧನೆಂದು ಹೆಸರಿಟ್ಟಿದ್ದರು. ಈ ಮರುಳಾರಾಧ್ಯರ ಬಗ್ಗೆ ಲಕ್ಷ್ಮೇಶ್ವರದ ಶಾಸನ ಹೀಗೆ ತಿಳಿಸುತ್ತದೆ. ಸ್ವಸ್ತಿ ಶ್ರೀ ಮತ್ಕೈಲಾಸವಾಸಿಯಾದ ಶ್ರೀ ಮತ್ಪರಮೇಶ್ವರಾವತಾರಮಪ್ಪ ರೇವಣಾಚಾರ್ಯ ಭಕ್ತಜನ ಹಿತಾರ್ಥಮಾಗಿ ಮರ್ತ್ಯಕ್ಕೆ ಪೂಲಿ (ಯ) ಮರುಳ ಸಿದ್ಧೇಶ್ವರ ನಾಮವಂ ಧರಿಸಿ ಕತಿಪಯ ದಿವಸಂ ತನ್ನ ಮಹಾತ್ಮೆಯಂ ಮೆಱದು ಚರಿಸುತ ಪಿಕರ ಪುರಕ್ಕೆಯ್ತಂದು ಸಕಲ ಭಕ್ತರಿಷ್ಟಾರ್ಥ ಸಿದ್ಧಿಯಂ ಸಾರ್ಚಿ ಶ್ರೀ ದಕ್ಷಿಣ ಸೋಮೇಶ್ವರ ಸಾನಿಧ್ಯದಲ್ಲಿ ಸಾಲಿವಾಹನ ಶಕದ ಸಾವಿರದ ನಾನೂಱಮೂವತ್ತಯ್ದನೆಯ ಶ್ರೀ ಮುಖಿಸಂವತ್ಸರದ ಭಾದ್ರಪದ ಶುದ್ಧ ಪಂಚಮೀ ಆದಿತವಾರದರುಣೋದಯದ ಕಾಲದಲ್ಲಿ ಶ್ರೀಲಿಂಗ ಮೂರ್ತಿಯಾಗಿ ನೆಲೆಸಿದ ಮರುಳಸಿದ್ಧೇಶ್ವರ ದೇವರಿಗೆ....[10] ಹೀಗೆ ಮರುಳಸಿದ್ಧ, ಮರುಳಾರಾಧ್ಯ ಎಂಬ ಹೆಸರಿನವರು ಇತಿಹಾಸದಲ್ಲಿ ಕಾಣಸಿಗುತ್ತಾರೆ. ಇವರಲ್ಲಿ ಸಿರಿಗೆರೆಯ ಮರುಳಸಿದ್ಧನು ಒಬ್ಬನು ಆತ ಅಂತ್ಯಜನೆಂದು ತಿಳಿದುಬರುತ್ತದೆ. ಹೀಗಿರುವಾಗ ಹೆಸರಿನ ಸಾಮ್ಯತೆಯಿಂದ ಒಬ್ಬ ಮರುಳಸಿದ್ಧನ ತಲೆಗೆ ಎಲ್ಲಾ ಇತಿಹಾಸವನ್ನು ಕಟ್ಟುವುದು ಸರಿಯಲ್ಲ.

**ಕೊನೆ ಟಿಪ್ಪಣಿಗಳು**

1. ವಿದ್ಯಾಶಂಕರ ಎಸ್. (2001). ಸಂಕೀರ್ಣ ವಚನ ಸಂಪುಟ–2, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು. ವಚನ 58, 63, ಪು.ಸಂ. 244–245
2. ಕಲಬುರ್ಗಿ ಎಂ. ಎಂ. (2001). ಸಂಕೀರ್ಣ ವಚನ ಸಂಪುಟ–1, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ವಚನ 275, ಪು.ಸಂ. 318–319.
3. ಅದೇ. ವಚನ 276. ಪು.ಸಂ. 319,
4. ಹಿರೇಮಠ ಬಿ.ಆರ್. (2001). ಸಂಕೀರ್ಣ ವಚನ ಸಂಪುಟ 3, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು. ವಚನ 29, ಪುಟ 350–351.
5. ಅದೇ. ವಚನ 27, ಪುಟ 454–455.
6. ಗುಬ್ಬಿಯ ಮಲ್ಲಣಾರ್ಯ. (1990). ವೀರಶೈವಾಮೃತ ಪುರಾಣ. ಭಾಗ 2, ಸಂ. ಡಾ. ಆರ್.ಸಿ. ಹಿರೇಮಠ, ಬೆಂಗಳೂರು. ಪು.ಸಂ. 1257.
7. ವಾಲಿ ಎ. ಸಿ. (2010). ಚತುರಾಚಾರ್ಯ ಚಾರಿತ್ರ : ಒಂದು ಅಧ್ಯಯನ. ಕಿರಣ–ದರ್ಶನ ಪ್ರಕಾಶನ, ಭಂಡಿವಾಡ ಪು.ಸಂ.289
8. ಹಿರೇಮಠ ಬಿ.ಆರ್. (1993). ಸಮಗ್ರ ವಚನ ಸಂಪುಟ–8. ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
9. ವಾಲಿ ಎ.ಸಿ. (2010). ಪೂರ್ವೋಕ್ತ., ಪು.ಸಂ. 291
10. ಚಂದ್ರಶೇಖರ ಶಿವಾಚಾರ್ಯ ಸ್ವಾಮಿ. (1998). ವೀರಶೈವ ಪಂಚಪೀಠ ಪರಂಪರೆ. ಚೆನ್ನಚೇತನ ಪ್ರಕಾಶನ, ಹೊನ್ನಳ್ಳಿ ಹಿರೇಕಲ್ಮಠ. ಪು.ಸಂ.50–60.